1	2	3
12	U.K	6406
13	D.K	13910
14	Kolar	11093
15	Mandya	6943
16	Mysore	18028
17	Raichur	7044
18	Shimoga	11043
19	Tumkur	17516
20	Bangalore (R)	13547
21	Bagalkot	5317
22	Chamarjanagar	6716
23	Davanagere	5998
24	Gadag	5908
25	Haveri	6823
26	Koppal	3402
27	Udupi	5786
	Total	**294620**

ಬೈಲಹೊಂಗಲ ತಾಲ್ಲೂಕಿನಲ್ಲಿ ಮೀನುಗಾರರಿಗೆ ಮನೆಗಳು

390(364) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಮೀನುಗಾರಿಕೆ ಹಾಗೂ ಬಂದರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕೆಂಗನೂರು ಹಾಗೂ ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಮತ್ತು ಮಾಟೊಳ್ಳಿ ಗ್ರಾಮದ ಮೀನುಗಾರರಿಗೆ ಮನೆ ಕಟ್ಟಿಕೊಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?

ಆ. ಇನ್ನು ಎಷ್ಟು ದಿನಗಳೊಳಗಾಗಿ ಮನೆಗಳನ್ನು ಕಟ್ಟಿಕೊಡಲಾಗುವುದು?

ಶ್ರೀ ವಸಂತ ವಿ.ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ಸಚಿವರು)

ಅ. ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಕೆಂಗಾನೂರು ಗ್ರಾಮದಲ್ಲಿ 1995-96ನೇ ಸಾಲಿನಲ್ಲಿ 64 ಮನೆಗಳನ್ನು ನಿರ್ಮಾಣ ಮಾಡಿ ಮೀನುಗಾರರಿಗೆ ಹಂಚಲಾಗಿದೆ. ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಗ್ರಾಮದ ಮೀನುಗಾರರಿಂದ ಮನೆ ಬೇಡಿಕೆ ಅರ್ಜಿಗಳು ಬಂದಿರುವುದಿಲ್ಲ. ಮೊಟೊಳ್ಳಿ ಗ್ರಾಮದಲ್ಲಿ 1995.96ನೇ ಸಾಲಿನಲ್ಲಿ 37 ಮನೆಗಳನ್ನು ನಿರ್ಮಾಣ ಮಾಡಿ ಫಲಾನುಭಾವಿಗಳಿಗೆ ವಿತರಿಸಲಾಗಿದೆ.

ಆ. ಉದ್ಭವಿಸುವುದಿಲ್ಲ.

ಸಕ್ಕರೆ ಕಾರ್ಖಾನೆಗಳ ಪುನರುಜ್ಜೀವನ ಕುರಿತು

391(365) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ): ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳೆಷ್ಟು? ಅವುಗಳಲ್ಲಿ ಸಹಕಾರಿ ಹಾಗೂ ಖಾಸಗಿ ರಂಗದ ಕಾರ್ಖಾನೆಗಳೆಷ್ಟು?

ಆ. ಸಹಕಾರಿ ರಂಗದಲ್ಲಿರುವ ಎಷ್ಟು ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿವೆ ಹಾಗೂ ಎಷ್ಟು ನಷ್ಟದಲ್ಲಿ (ವಿವರ ನೀಡುವುದು);

ಇ. ಸಹಕಾರಿ ರಂಗದ ಹಾನಿಯಲ್ಲಿರುವ ಸಕ್ಕರೆ ಕಾರ್ಖಾನೆಗಳೆಷ್ಟು? (ವಿವರ ನೀಡುವುದು)

ಈ. ಹಾಗಿದ್ದಲ್ಲಿ ಈ ಸಕ್ಕರೆ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ. ರಾಜ್ಯದಲ್ಲಿ ಒಟ್ಟು 41 ಸಕ್ಕರೆ ಕಾರ್ಖಾನೆಗಳಿವೆ. ಇವುಗಳಲ್ಲಿ 20 ಸಹಕಾರಿ ಕ್ಷೇತ್ರದಲ್ಲಿ, 2 ಸಾರ್ವ ಜನಿಕ ಕ್ಷೇತ್ರದಲ್ಲಿ, 1 ಜಂಟಿ ಕ್ಷೇತ್ರದಲ್ಲಿ ಹಾಗೂ 18 ಖಾಸಗಿ ಕ್ಷೇತ್ರದಲ್ಲಿರುತ್ತವೆ.

ಆ. ಇ ಸಹಕಾರಿ ರಂಗದಲ್ಲಿನ ಒಟ್ಟು 20 ಸಕ್ಕರೆ ಕಾರ್ಖಾನೆಗಳಲ್ಲಿ 2 ಹೊಸ ಸಹಕಾರ ಸಕ್ಕರೆ ಕಾರ್ಖಾನೆಗಳಾಗಿದ್ದು, ಅವು 2002-03ನೇ ಪ್ರಸಕ್ತ ಹಂಗಾಮಿನಿಂದ ಕಬ್ಬು ನುರಿಸುವ ಕಾರ್ಯ ಪ್ರಾರಂಭಿಸಿವೆ. ಆದುದರಿಂದ 18 ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ 2001-02ನೇ ಸಾಲಿನ ಅಂತ್ಯಕ್ಕೆ ಲಾಭ: ನಷ್ಟಗಳ ವಿವರ ಈ ರೀತಿ ಇದೆ. 2001-02ನೇ ಸಾಲಿಗೆ 3 ಸಕ್ಕರೆ ಕಾರ್ಖಾನೆಗಳು ಲಾಭಗಳಿಸಿದ್ದು, 15 ಸಕ್ಕರೆ ಕಾರ್ಖಾನೆಗಳು ನಷ್ಟ ಅನುಭವಿಸಿರುತ್ತವೆ. 18 ಸಹಕಾರ ಸಕ್ಕರೆ ಕಾರ್ಖಾನೆಗಳ ಲಾಭ : ನಷ್ಟಗಳ ವಿವರವುಳ್ಳ ತಃಖ್ತೆಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. 2001-02ನೇ ಸಾಲಿನ ಅಂತ್ಯಕ್ಕೆ 15 ಸಹಕಾರಿ ಸಕ್ಕರೆ ಕಾರ್ಖಾನೆಗಳು ಕ್ರೋಡೀಕೃತ ನಷ್ಟದಲ್ಲಿರುತ್ತವೆ.

ಈ. ಈ ಸಕ್ಕರೆ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರ್ಕಾರದ ಇತ್ತೀಚಿನ ಪುನಃಶ್ಚೇತನ ಯೋಜನೆಯಂತೆ ರಾಜ್ಯದಲ್ಲಿನ 10 ಸಹಕಾರ ಸಕ್ಕರೆ ಕಾರ್ಖಾನೆಗಳ ಪೈಕಿ ರೋಗಗ್ರಸ್ಥವೆಂದು ಗುರುತಿಸಿದ 4 ಕಾರ್ಖಾನೆಗಳ ಪುನಃಶ್ಚೇತನ ಯೋಜನೆಗಳನ್ನು ಸಿದ್ಧಪಡಿಸಿದ್ದು, ಇವುಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

ಅನುಬಂಧ

ಸಹಕಾರ ಸಕ್ಕರೆ ಕಾರ್ಖಾನೆಗಳ ಲಾಭ:ನಷ್ಟದ ವಿವರ: (31-3-2002ರ ಅಂತ್ಯಕ್ಕೆ) ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ

ಕ್ರ.ಸಂ.	ಕಾರ್ಖಾನೆಯ ಹೆಸರು	ಲಾಭ	ನಷ್ಟ
1	2	3	4
1.	ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ (ನಿ)	-	1965.66
2.	ಭದ್ರ -"-	-	408.04
3.	ಭಾಗ್ಯಲಕ್ಷ್ಮಿ -"-	-	3623.23
4.	ದಕ್ಷಿಣ ಕನ್ನಡ -"-	-	3381.33
5.	ದೂಧಗಂಗಾ ಕೃಷ್ಣಾ -"-	-	2105.99

1	2	3	4
6.	ದಿ ಘಟಪ್ರಭಾ -ಿ-	-	194.64
7.	ಹಾಲಸಿದ್ದನಾಥ -ಿ-	-	1640.69
8.	ಹೇಮಾವತಿ -ಿ-	-	631.18
9.	ಹಿರಣ್ಯಕೇಶಿ -ಿ-	21.10	-
10.	ಮಲಪ್ರಭಾ -ಿ-	8.93	-
11.	ದಿ ನಂದಿ -ಿ-	93.22	-
12.	ಪಾಂಡವಪುರ -ಿ-	-	8961.82
13.	ರಾಯಬಾಗ್ -ಿ-	-	8529.78
14.	ರೈತರ -ಿ-	-	1677.99
15.	ಶ್ರೀ ಶ್ರೀ ರಾಮ -ಿ-	-	1501.42
16.	ದಿ ವಾಣಿವಿಲಾಸ -ಿ-	-	1013.63
17.	ದಿ ಕರ್ನಾಟಕ -ಿ-	-	1715.54
18.	ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಆಳಂದ	-	3308.93
	ಒಟ್ಟು	123.25	40659.87

2001-02ನೇ ಸಾಲಿಗೆ:

ಲಾಭದಲ್ಲಿ-03 ಸಹಕಾರ ಸಕ್ಕರೆ ಕಾರ್ಖಾನೆಗಳಿರುತ್ತವೆ.

ನಷ್ಟದಲ್ಲಿ -13 ಸಹಕಾರ ಸಕ್ಕರೆ ಕಾರ್ಖಾನೆಗಳಿರುತ್ತವೆ.

ಕುಂತೂರು ಮಹದೇಶ್ವರ ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದಂತೆ

392(688) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ): ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕುಂತೂರು ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾದ ಬಾಕಿ ಮೊಬಲಗನ್ನು ಪೂರ್ತಿ ಪಾವತಿಸಲಾಗಿದೆಯೇ ಇಲ್ಲದಿದ್ದಲ್ಲಿ, ಪಾವತಿಸಬೇಕಾದ ಮೊಬಲಗೆಷ್ಟು? ಉಳಿಕೆ ಮೊಬಲಗನ್ನು ಯಾವಾಗ ಪಾವತಿಸಲಾಗುವುದು (ವಿವರ ನೀಡುವುದು)

ಆ. ಸದರಿ ಕಾರ್ಖಾನೆಯ ನೌಕರರುಗಳಿಗೆ ನೀಡಬೇಕಾದ ಸಂಬಳ ವಗೈರೆಗಳನ್ನು ನೀಡಲಾಗಿದೆಯೇ: ಇಲ್ಲದಿದ್ದಲ್ಲಿ, ಯಾವಾಗ ನೀಡಲಾಗುವುದು ಹಾಗೂ ನೀಡಬೇಕಾಗಿರುವ ಮೊಬಲಗು ಎಷ್ಟು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)